ದೂರದ ಅಂಗಡಿಯಲ್ಲಿ ಪೇಪರ್ ಹುಡುಗರು ಜಾಹೀರಾತಿನ ಕಾಗದದ ತುಂಡನ್ನು ದಿನಪತ್ರಿಕೆಯಲ್ಲಿ ಸೇರಿಸುತ್ತಿದ್ದರು. ಸುತ್ತಲಿರುವ ಮೈಕುಗಳು ಯಥಾ ಶಕ್ತಿ ತಮ್ಮ ಧ್ವನಿ ಸೇರಿಸಲು ಪ್ರಾರಂಭಿಸಿದ್ದವು.

ಮರುದಿನ ಶನಿವಾರ. ಹುಡುಗರಿಗೆಲ್ಲ ರಜೆ. ಬೆಳಿಗ್ಗೆ ಸುಮಾರು ಹತ್ತೂವರೆ ಆಗಿರಬೇಕು. ಎಲ್ಲರೂ ಆರಾಮಾಗಿ ಎದ್ದು ಬೆಳಗಿನ ತಿಂಡಿ ಮಾಡಿಕೊಂಡು ವಾಲಿಬಾಲಿಗೆ ಗಾಳಿ ತುಂಬಿಸಿಕೊಂಡು ಕಂಬಕ್ಕೆ ನೆಟ್ ಬಿಗಿದು ಆಟ ಪ್ರಾರಂಭಿಸಿದ್ದರಷ್ಟೇ. ಇನ್ನೂ ಹತ್ತು ನಿಮಿಷವಾಗಿರಲಿಲ್ಲ. ಅತ್ತ ಕಡೆಯಿಂದ ಬಶೀರ ಓಡಿ ಬಂದು 'ನನ್ನನ್ನು ಸೇರಿಸಿಕೊಳ್ಳಿರೊ ನನ್ನನ್ನು ಸೇರಿಸಿಕೊಳ್ಳಿರೊ' ಎಂದು ಕೂಗುತ್ತಲೇ ಹಾಸ್ಟೆಲಿನ 'ಎ' ಬ್ಲಾಕಿಗೆ ಅಂದರೆ 'ಸಿ' ಬ್ಲಾಕಿಗೆ ಎದುರಾಗಿರುವ ಕೋರ್ಟಿನಲ್ಲಿ ಸೇರಿಕೊಂಡು ನಾನು ಸರ್ವಿಸ್ ಮಾಡುತ್ತೇನೆ ಎಂದು ಬಾಲ್ ಕಸಿದುಕೊಂಡ. ಈತ ಯಾಕೆ ಈ ರೀತಿ ಮಧ್ಯದಲ್ಲಿ ಸೇರಿಕೊಂಡ. ಯಾಕೆ ಈಗ ಸರ್ವಿಸ್ ಮಾಡುತ್ತಿದ್ದಾನೆ. ಸರ್ವಿಸು ಈಗ ನಮ್ಮದು ಎನ್ನುತ್ತಿದ್ದವರ ಬಗ್ಗೆ ಏನೂ ತಲೆಹಾಳುಮಾಡಿಕೊಳ್ಳದೇ ಮೂರು ನಾಲ್ಕು ಸರ್ವಿಸ್ ತನ್ನ ಕಡೆಯಿಂದ ಆಗುತ್ತಿದ್ದಂತೆಯೇ ಕೈಯಿಂದ ಆ ಕಡೆ ಸನ್ನೆ ಮಾಡಿ 'ಬಾ' ಎಂದ. ಅತ್ತ ಕಡೆಯಿಂದ ಪಂಕಜ ನಿಧಾನವಾಗೇ ನಡೆದುಕೊಂಡು ಬಂದು ಗೇಟಿನಿಂದ ಹೊರ ನಡೆದಳು. ಬಶೀರ ಅವಳಿಗೆ ಕಣ್ ಸನ್ನೆ, ತಲೆಯಲ್ಲೇ ಬಾಯ್ ಬಾಯ್ ಎನ್ನುತ್ತಿದ್ದ. ಎಲ್ಲರೂ ಆಟದಲ್ಲಿ ಮಗ್ನರಾಗಿದ್ದರು. ಕೆಲವರು ಪೇಪರ್ ಓದುತ್ತಿದ್ದರು. ಅವಳನ್ನು ನೋಡಿದವರು ಹೆಚ್ಚಾಗಿ ಹಾಸ್ಟೆಲ್ ಮೆಸ್ಸಿಗೆ ಅಡುಗೆಗೆ ಕಾಯಿಪಲ್ಲೆ ಹೆಚ್ಚಲು ಬಂದ ಹೊಸಬಳಿರಬೇಕು ಎಂದುಕೊಂಡರು. 'ನೀವು ಮುಂದುವರಿಸಿ, ನನಗೆ ಹೋಗಬೇಕು' ಎಂದು ವಾಲಿಬಾಲ್ ಕೋರ್ಟಿಂದ ಬಶೀರ ಹೊರನಡೆದ. ಆಡುತ್ತಿದ್ದ ಕೆಲವರು ಇನ್ನು ಯಾರನ್ನೂ ಹೀಗೆ ಮಧ್ಯದಲ್ಲಿ ಸೇರಿಸಿಕೊಳ್ಳಬಾರದು ಎನ್ನುತ್ತಿದ್ದರು. ಅದನ್ನು ಬಶೀರ ಕೇಳಿಸಿಕೊಂಡು ಕಿಕ್ ಕಿಕ್ ಕಿಕ್ ಎಂದು ಹೊಟ್ಟೆ ತುಂಬ ನಕ್ಕುಬಿಟ್ಟ.

★★★

ನಿರುಂಬಳನಾದ ಬಶೀರ 'ಎ' ಬ್ಲಾಕಿನ ಟೇಬಲ್ಲಿನ ಮೇಲಿದ್ದ ದಿನಪತ್ರಿಕೆಯನ್ನು ಎತ್ತುಕೊಂಡು ತನ್ನ ರೂಮಿಗೆ ನಡೆದ. ಯಾರಾದರೂ ಹೊರಗೆ ಟೇಬಲ್ಲಿನ ಮೇಲಿದ್ದ ದಿನಪತ್ರಿಕೆಯನ್ನು ತಮ್ಮ ರೂಮಿಗೆ ಒಯ್ದರೆ ಐದು ರೂಪಾಯಿ ಫೈನ್ ಕಟ್ಟಬೇಕಿತ್ತು. ಅದು ಯಾವುದಕ್ಕೂ ತಲೆಕೆಡಿಸಿಕೊಳ್ಳದೇ ಮುಕಳಿಗೆ ಒರೆಸಿಕೊಂಡು ಹೋಗಿದ್ದ. ಕಾಲು ಮೇಲೆ ಮಾಡಿಕೊಂಡು ಪಕ್ಕದ ಬೆಡ್ಡಿಗೆ ಒರಗಿ ಪೇಪರ್ ಓದುತ್ತಿದ್ದಾಗ ಕೆಲವರು ಬಂದು 'ಎಲ್ಲಿ ನಿನ್ನೆ ನೀನು ವೈಜ್ಞಾನಿಕ ಚಿತ್ರ ಹಾಕಲೇ ಇಲ್ಲ. ನಿನ್ನೆ ಎಷ್ಟು ಹುಡುಕಿದೆವು ಗೊತ್ತಾ... ರೂಮಿಗೂ ಎರಡು ಸಾರಿ ಬಂದಿದ್ದೊ... ನೀ ಮಾತ್ರ ನಾಪತ್ತೆ' ಎಂದರು. ಅದಕ್ಕೆ ಬಶೀರ 'ಹೇಳಿದ್ದೆಲ್ಲಾ ಮಾಡುತ್ತೇನೆ ಎಂದು ನಿಮಗೆಲ್ಲ ಬರೆದುಕೊಟ್ಟಿಲ್ಲಾ ಗುರು. ನಮಗೂ ಒಂದು ಪರ್ಸನಲ್ ಲೈಫ್ ಇದೆಯಲ್ಲಾ' ಎಂದು ಬಂದವರಿಗೆ ತಮಾಷೆ ಮಾಡಿ ತನ್ನ ಸಿಗ್ನೇಚರ್ ನಗೆ ಕಿಕ್ ಕಿಕ್ ಕಿಕ್ ಎಂದು ನಕ್ಕಿ 'ಸಾರಿ ಕಣಪ್ಪ ಈ ವಾರ ಒಳ್ಳೆ ಪ್ರಿಂಟ್ ತರತೀನಿ ಪ್ರಾಮಿಸ್' ಎಂದು ಹೇಳಿ ಅವರನ್ನು ಕಳುಹಿಸಿದ. ಮತ್ತೆ ಕಾಲು ಮೇಲೆ ಹಾಕಿಕೊಂಡು ಸ್ವಲ್ಪ ಹೊತ್ತು ದಿನಪತ್ರಿಕೆ ಓದಿದ.

ಮಧ್ಯಾಹ್ನವಾಗುತ್ತಿತ್ತು. ಹೊರಗಿನ ಬಿಸಿಲಿನ ಧಗೆಯಿಂದ ಒಳಗೆ ದಿನಪತ್ರಿಕೆ ಓದುತ್ತಿದ್ದ ಬಶೀರ ಬೆವರುತ್ತಿದ್ದ. ಬನಿಯನ್ ಏರಿಸಿಕೊಂಡಿದ್ದ; ಬೆನ್ನು ಸಣ್ಣಗೆ ಒದ್ದೆಯಾಗಿ ಬೆವರು ಮಿಶ್ರಿತ ಇಮಾಮಿ ಪೌಡರಿನ ಪರಿಮಳ ಬರುತ್ತಿತ್ತು. ಸುತ್ತ ನೋಡಿದ, ಯಾರೂ ಕಾಣಲಿಲ್ಲ. ತನ್ನ ಬನಿಯನನ್ನೇ ಇನ್ನೊಮ್ಮೆ ಎಳೆದುಕೊಂಡು ಆ ಪರಿಮಳ ಹೀರಿದ. ಸ್ನಾನ ಮಾಡಲೂ ಮನಸಾಗಲಿಲ್ಲ. ಅಲ್ಲೇ ಬೋರಲಾಗಿ ಮಲಗಿದ. ಯಾರೋ ಬಂದು 'ಪೇಪರ್ ತಂದಿದೀರಾ' ಎಂದು ಅಲ್ಲಿದ್ದ ಪೇಪರ್ ತೆಗೆದುಕೊಂಡು ಹೋದರು. ಬಶೀರನಿಗೆ ಎಚ್ಚರವಿರಲಿಲ್ಲ; ಗಾಢವಾದ ನಿದ್ರೆ.

ನಿನ್ನೆ ರಾತ್ರಿ ಪೊಲೀಸರನ್ನು ಎದುರಿಸಿದವರಿಗೆ ಇನ್ನೂ ಹೆದರಿಕೆ ಹೋಗಿರಲಿಲ್ಲ. ಆರಾಧ್ಯ